

ಒಂದು ದಿನ ಒಬ್ಬ ತಂದೆ ತನ್ನ 12 ವರ್ಷದ ಮಗನ ಜೊತೆ ರೈಲಿನಲ್ಲಿ ಪ್ರಯಾಣ ಹೊರಟಿದ್ದ. ಮಗನೋ ಅಬ್ಬಾ... ತುಂಬಾ ಪೋಕರಿ! ಒಂದು ಕ್ಷಣವೂ ಸುಮ್ಮನೆ ಕೂತಿರಲಿಲ್ಲ. ನಿಂತಲ್ಲೇ ನಿಲ್ಲದೆ, ಕೂತಲ್ಲೇ ಕುಳಿತುಕೊಳ್ಳದೆ, ಯಾರಿಗಾದರೂ ಸಿಕ್ಕಿದ ಚೀಲ, ಬಟ್ಟೆ, ಪೇಪರ್ ಎಳೆದು ತಮಾಷೆ ಮಾಡುತ್ತಾ ಎಲ್ಲರಿಗೂ ತೊಂದರೆ ಕೊಡುತ್ತಿದ್ದ. ರೈಲಿನಲ್ಲಿದ್ದ ಜನರಿಗೆಲ್ಲಾ ಕಿರಿಕಿರಿ. ಕೆಲವರು ಕೋಪದಿಂದ ಮಗನ ಕಡೆ ನೋಡಿದರು, ಕೆಲವರು ತಂದೆಯ ಕಡೆ ಕಟು ದೃಷ್ಟಿ ಹಾಕಿದರು.

ಇದನ್ನು ನೋಡಿ ಆತನ ತಂದೆ ಅವನಿಗೆ ಎರಡು ಕೊಟ್ಟು ಸುಮ್ಮನೆ ಕುಳಿತುಕೊಳ್ಳಿಸದೆ, "ಸಮಾಧಾನ ಸದಾಶಿವ, ಸಮಾಧಾನ ಸದಾಶಿವ" ಎಂದು ಹೇಳುತ್ತಿದ್ದ.
ಹುಡಗ ತಂದೆಯ ಮಾತನ್ನು ಕಿವಿಗೆ ಹಾಕಿಕೊಳ್ಳದೆ ತಮಾಷೆ ಮಾಡಿ ತೊಂದರೆ ಕೊಡುತ್ತಲೇ ಇದ್ದ. ಸ್ಟೇಷನ್ ಬಂದ ತಕ್ಷಣ ಮಗನ ಕೈ ಹಿಡಿದು ಆತ ಇಳಿದ. ಇದನ್ನು ನೋಡಿದ ಇನ್ನೊಬ್ಬ ಅಂದ ಹತ್ತಿರಕ್ಕೆ ಕೇಳುತ್ತಾನೆ:
"ಅಲ್ಲ ಮರಾಯ, ನಿಮ್ಮ ಮಗ ಇಷ್ಟು ಲೂಟಿ ಮಾಡಿದಾಗಲು, ಅವನಿಗೆ ಎರಡು ಕೊಟ್ಟು ಬುದ್ಧಿ ಹೇಳುವ ಬದಲು 'ಸಮಾಧಾನ ಸದಾಶಿವ!' ಎಂದು ಹೇಳುತ್ತಿದ್ದೀರಲ್ಲಾ, ನಿಮ್ಮ ಮಗ ಸದಾಶಿವ ನಿಮ್ಮ ಮಾತು ಕೇಳಿದನಾ?"
ಆಗ ಆ ಹುಡಗನ ತಂದೆ ಕೇಳುತ್ತಾರೆ:
"ನಿಮಗೆ ನನ್ನ ಮಗನ ಹೆಸರು ಸದಾಶಿವ ಅಂತ ಯಾರು ಹೇಳಿದ್ರು?"
"ಮತ್ತೆ ಸಮಾಧಾನ ಸದಾಶಿವ ಅಂತ ಹೇಳ್ತಿದ್ದೀರಲ್ಲ!"
"ಸಮಾಧಾನ ಸದಾಶಿವ" ಎಂದು ನಾನು ನನಗೇನೇ ಹೇಳುತ್ತಿದ್ದದ್ದು. ನಾನೇ ಸದಾಶಿವ! ನನ್ನ ಮಗ ಹೇಳಿದ್ದು ಕೇಳುವ ಜಾತಿ ಅಲ್ಲ. ಅದಕ್ಕೆ ನಾನು 'ಸಮಾಧಾನ ಸದಾಶಿವ' ಎಂದು ನನ್ನನ್ನೇ ಸಮಾಧಾನ ಮಾಡುತ್ತಿದ್ದೆ.
ಬೇರೆಯವರು ನಮ್ಮ ಮಾತು ಕೇಳಲ್ಲ ಅಂದರೆ, ನಮ್ಮನ್ನು ನಾವೇ ಬದಲಿಸಿಕೊಳ್ಳುವುದು ಸುಲಭ ಅಲ್ಲವೇ?
ತಂದೆಯ ಉತ್ತರ ಕೇಳಿ ಕೇಳುವವನಿಗೂ ಹೌದು ಎಂದು ಖಚಿತವಾಯಿತು!

ನೀತಿ:

ನಾವು ಬೇರೆಯವರನ್ನು ಬದಲಾಯಿಸಲು ಪ್ರಯತ್ನಿಸುವುದಕ್ಕಿಂತ ಮೊದಲು, ನಮ್ಮನ್ನು ನಾವು ನಿಯಂತ್ರಿಸಿಕೊಳ್ಳುವುದು ಮತ್ತು ಸಮಾಧಾನದಿಂದ ಇರಲು ಕಲಿಯುವುದು ಮುಖ್ಯ.